## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ರಾಮಕೃಷ್ಣ, ಉಪ ಕಾರ್ಯದರ್ಶಿ (ಗ್ರಾನೀಸ) ಇವರ ವಿರುದ್ಧದ ಇಲಾಖಾ ವಿಚಾರಣಾ ಬಾಕಿ ಇರಿಸಿ ಅಮಾನತ್ತುಗೊಳಸುವ ಬಗ್ಗೆ.- ಆದೇಶ.

******

ಪ್ರಸ್ತಾವನೆ:

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಗೆ ಸೇರಿದ ಶ್ರೀ ರಾಮಕೃಷ್ಣ, ಉಪ ಕಾರ್ಯದರ್ಶಿ (ಗ್ರಾನೀಸ), ಇವರು ಕೇಂದ್ರ ಮತ್ತು ರಾಜ್ಯ ಸರ್ಕಾರವು ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಿದ ಅಭಿವೃದ್ಧಿ ಕಾರ್ಯಗಳಿಗೆ ಬಳಕೆಯಾಗಬೇಕಾದ ನೂರಾರು ಕೋಟಿ ರೂಪಾಯಿಗಳನ್ನು ಕೆಲ ಬ್ಯಾಂಕುಗಳಲ್ಲಿ ಠೇವಣಿ ಮಾಡಿ ಗಂಭೀರ ಸ್ವರೂಪದ ಹಣಕಾಸಿನ ಅಶಿಸ್ತು ಎಸಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಬಿಡುಗಡೆಯಾದ ಅನುದಾನವನ್ನು ನಿಯಮಬಾಹಿರವಾಗಿ ಸರ್ಕಾರದ ಹಣಕಾಸು ನೀತಿ ನಿಯಮಗಳು ಮತ್ತು ಆದೇಶಗಳಿಗೆ ವ್ಯತಿರಿಕ್ತವಾಗಿ ಸುಮಾರು 4 ವರ್ಷಗಳಿಂದ ರೂ.134 ಕೋಟಿಗಳು ಆಂಧ್ರ ಬ್ಯಾಂಕ್ ಖಾತೆಯಲ್ಲಿಡಲಾಗಿದೆ. ಸಾರ್ವಜನಿಕ ಹಣಕಾಸು ನಿರ್ವಹಣೆಯ ಮಾರ್ಗಸೂಚಿಗಳ ಉಲ್ಲಂಘನೆಯ ಪ್ರಕರಣವು ಮಾನ್ಯ ಸಚಿವರ ಗಮನಕ್ಕೆ ಬಂದ ಕೂಡಲೇ ಈ ವಿಷಯದ ಕುರಿತು ಪ್ರಾಥಮಿಕ ತನಿಖೆ ನಡೆಸಲು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಿನಾಂಕ: 22.12.2014ರಂದು ನಿರ್ದೇಶನ ನೀಡಿದ್ದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಮಧ್ಯಂತರ ವರದಿ ನೀಡಿ ಸಂಬಂಧಪಟ್ಟ ಕೆಲವು ಅಧಿಕಾರಿಗಳು ದಾಖಲೆ ನೀಡದೇ ತನಿಖೆಗೆ ಸಹಕರಿಸುತ್ತಿಲ್ಲವೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟವರಿಗೆ ತನಿಖೆಗೆ ಸಹಕರಿಸುವಂತೆ ನಿರ್ದೇಶನ ನೀಡಲು ಹಾಗೂ ತನಿಖೆ ಚುರುಕುಗೊಳಿಸಿ ವರದಿ ಸಲ್ಲಿಸಲು ದಿನಾಂಕ: 16.01.2015ರಂದು ಮಾನ್ಯ ಸಚಿವರು ಸೂಚನೆ ನೀಡಿದ್ದಾಗ್ಯೂ ಅಂತಿಮ ವರದಿ ಸಲ್ಲಿಕೆಯಾಗಿರುವುದಿಲ್ಲ.

ಸದರಿ ಖಾತೆಯಲ್ಲಿರುವ ಮೊಬಲಗುಗೆ ಯಾವುದೇ ನಗದು ಪುಸ್ತಕ ಅಥವಾ ಬ್ಯಾಂಕಿನ ಪಾಸ್ ಶೀಟ್ ನಿರ್ವಹಣೆ ಮಾಡದಿರುವುದು ಪ್ರಾಥಮಿಕ ತನಿಖೆಯಲ್ಲಿ ಸ್ಪಷ್ಟವಾಗಿದೆ. ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ-329(2)ರ ಪ್ರಕಾರ ಸರ್ಕಾರದ ಯಾವುದೇ ಬಾಬ್ತು ನಗದು ಪುಸ್ತಕದಲ್ಲಿ ನಿರ್ವಹಣೆ ಮಾಡದೇ ವಹಿವಾಟು ಮಾಡುವಂತಿಲ್ಲ. ಆದುದರಿಂದ ಇದೊಂದು ಗಂಭೀರ ಕರ್ತವ್ಯಲೋಪವಾಗಿದೆ.

ಸುಮಾರು 4 ವರ್ಷಗಳಿಂದ ಸರ್ಕಾರದ ಹಣಕಾಸು ಮುಖ್ಯ ವಾಹಿನಿ ಹೊರಗೆ ಠೇವಣಿ ಮಾಡಿರುವುದು ಹಾಗೂ ಪ್ರತಿ ಆರ್ಥಿಕ ವರ್ಷದ ಅಂತ್ಯದಲ್ಲಿ ಲೆಕ್ಕ ಸಮನ್ವಯ ಮಾಡದೇ ಇರುವುದು ಹಾಗೂ ಮೇಲಾಧಿಕಾರಿಗಳ ಗಮನಕ್ಕೆ ತರದೇ ಬ್ಯಾಂಕಿನಲ್ಲಿಯೇ ಠೇವಣಿ ಇಟ್ಟಿರುವುದು ಗಂಭೀರವಾದ ಹಾಗೂ ಗುರುತರವಾದ ಲೋಪವಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 1958ರ Cannons of Financial Propriety ಯ ಅನುಚ್ಛೇದ 15-16ರನ್ವಯ ಕ್ರಮವಹಿಸುವುದು/ ಪಾಲಿಸುವುದು ಪ್ರತಿಯೊಬ್ಬ ಸರ್ಕಾರಿ ನೌಕರರ ಆದ್ಯ ಕರ್ತವ್ಯವಾಗಿರುತ್ತದೆ. ಸದರಿ ಅನುಚ್ಛೇದಗಳನ್ವಯ ಪರಿಪಾಲಿಸದಿರುವುದು ಗಂಭೀರವಾದ ಆರ್ಥಿಕ ಅನೌಚಿತ್ಯವಾಗಿದೆ. ಇದಲ್ಲದೆ, ಕೆಳಕಂಡ ಬಿಲ್ಲುಗಳ ಬಾಬ್ತು ನಿಯಮಬಾಹಿರವಾಗಿ ಆಂಧ್ರ ಬ್ಯಾಂಕ್ ಖಾತೆಯಿಂದ ವರ್ಗಾಯಿಸಿರುವುದು / ಹಿಂಪಡೆದಿರುವುದು ಇನ್ನೂ ಹೆಚ್ಚಿನ ಅನುಮಾನಗಳಿಗೆ-ಎಡೆಮಾಡಿಕೊಡುತ್ತದೆ.

| ಕ್ರ.ಸಂ | ವಹಿವಾಟಿನ ಮೊತ್ತ (ರೂ.ಗಳಲ್ಲಿ) | ದಿನಾಂಕ | ಷರಾ (As per Bank Statement ) |
|---|---|---|---|
| 1 | 7,62,092.00 | 10.10.,2011 | ಮಂಡ್ಯ ತಪ್ಪಾಗಿ ಸ್ವೀಕೃತಿ |
| 2 | 49,32,000.00 | 09.11.2011 | ಜಿಲ್ಲಾ ಪಂಚಾಯತ್, ಬಳ್ಳಾರಿ |
| 3 | 7,00,000.00 | 29.11.2011 | ಆರ್.ಟಿ.ಜಿ.ಎಸ್..ಗ್ರಾನೀಸ |
| 4 | 2,68,937.00 | 01.10./2011 | ಆರ್.ಟಿ.ಜಿ.ಎಸ್.ಬಿ.ಡಬ್ಲ್ಯು.ಎಸ್.ಎಸ್.ಬಿ. |
| 5 | 5,00,00,000.00 | 30.03.2013 | ಆರ್.ಟಿ.ಜಿ.ಎಸ್., ಗ್ರಾನೀಸ |
| 6 | 3,87,765.00 | 22.11.2013 | ಎಂ.ವಿ.ಗಿರಿರಾಜ್ |
| 7. | 2,74,376.00 | 25.03.2013 | ಎಂ.ವಿ.ಗಿರಿರಾಜ್ |
| 8. | 2,66,460.00 | 25.03.2014 | ಎಂ.ವಿ.ಗಿರಿರಾಜ್ |
| 9. | 4,06,230.00 | 26.04.2014 | ಎಂ.ವಿ.ಗಿರಿರಾಜ್ |

ಕಡತಗಳ ಪರಿಶೀಲನೆ ಹಾಗೂ ತನಿಖೆಯ ಮಧ್ಯಂತರ ವರದಿಯ ಪ್ರಕಾರ ಶ್ರೀ ರಾಮಕೃಷ್ಣ, ಉಪ ಕಾರ್ಯದರ್ಶಿ (ಗ್ರಾನೀಸ) ಇವರು ಮೇಲ್ಕಂಡ ಠೇವಣಿ ಹಾಗೂ ಈ ಖಾತೆಯ ವಹಿವಾಟುಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದ್ದರಿಂದ ಮೇಲ್ಕಂಡ ಅಕ್ರಮಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ, ಈ ಅಕ್ರಮದಲ್ಲಿ ಮೇಲ್ನೋಟಕ್ಕೆ ಕಾರಣರಾಗಿರುವ ಸದರಿ ಅಧಿಕಾರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತುಗೊಳಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 92 ಪಬವ 2015**
**ಬೆಂಗಳೂರು, ದಿನಾಂಕ: 07.04.2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ರಾಮಕೃಷ್ಣ, ಉಪ ಕಾರ್ಯದರ್ಶಿ (ಗ್ರಾನೀಸ) ಇವರು ಎಸಗಿರುವ ಕರ್ತವ್ಯಲೋಪ / ದುರ್ನಡತೆಗೆ ಸಂಬಂಧಿಸಿದಂತೆ ಸದರಿಯವರ ವಿರುದ್ಧದ ಶಿಸ್ತು ಕ್ರಮವನ್ನು ಕಾಯ್ದಿರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಡಿ) ರಡಿ ಪ್ರದತ್ತವಾದ ಅಧಿಕಾರದನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ.

ಸದರಿ ಅಧಿಕಾರಿಯು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಸಕ್ಷಮ ಪ್ರಾಧಿಕಾರದ ಅನುಮೋದನೆ ಇಲ್ಲದೇ ಕೇಂದ್ರ ಸ್ಥಾನ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು,(ಎ ಮತ್ತು ಇ) ಕರ್ನಾಟಕ, ಬೆಂಗಳೂರು.

2) ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ,ಬೆಂಗಳೂರು
3) ಎಲ್ಲಾ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
4) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ, (ಐಆರ್ಎಲ್ಎ)
5) ಸಂಬಂಧಿಸಿದ ಅಧಿಕಾರಿಯವರಿಗೆ
6) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ ರವರ ಮಾಹಿತಿಗಾಗಿ
7) ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ, ಗ್ರಾ.ಅ.ಪಂ.ರಾಜ್ ಇಲಾಖೆ
8) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿ (ಪಂ.ರಾಜ್)/ಜಂಟಿ ಕಾರ್ಯದರ್ಶಿ/ಉಪ ಕಾರ್ಯದರ್ಶಿ ಇವರ ಆಪ್ತ ಶಾಖೆಗೆ
9) ವಿಶೇಷ ಅಧಿಕಾರಿ, ಗಣಕ ಕೋಶ, ಗ್ರಾಅಪ ಇಲಾಖೆ
10) ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿ